ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಹುಣಸೂರು

ಓ.ಎಸ್. **167/2014**

ಸಿ.ಡಬ್ಲೂ-**1**

ದಿಃ **13.06.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಎನ್.ಎಸ್.ಚೆನ್ನಪ್ಪ |
| ಗಂಡ/ತಂದೆಯ ಹೆಸರು | ಸಣ್ಣಯ್ಯ |
| ವಯಸ್ಸು | ಸುಮಾರು 46 ವರ್ಷ |
| ಕೆಲಸ | ಜೂನಿಯರ್ ಇಂಜಿನಿಯರ್ |
| ವಾಸಸ್ಥಳ | ಮೈಸೂರು |

<u>ಮುಖ್ಯ ವಿಚಾರಣೆ</u>

2017 ರಿಂದ ಡಿಸೆಂಬರ್ 2023 ರವರೆಗೆ ಪಿ.ಡಬಲ್ಯ್ ಇಲಾಖೆಯಲ್ಲಿ ಜೂನಿಯರ್ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.11.2023 ರಂದು ನಾನು ಸ್ಥಳಕ್ಕೆ ಭೇಟಿ ನೀಡಿದ್ದು, ವಾದಿ ಮತ್ತು ಪ್ರತಿವಾದಿಗಳಿಗೆ ದಿಃ 08.11.2023 ರಂದು ಹಾಜರಾಗುವಂತೆ ದಿಃ 02.11.2023 ರಂದು ನೋಟಿಸ್ ನೀಡಿರುತ್ತೇನೆ. ಸ್ಥಳಕ್ಕೆ ಹೋಗಿ ಸ್ಥಳದಲ್ಲಿ ಮಹಜರ್ ವರದಿ ಹಾಗೂ ಸ್ಥಳ ಮಹಜರ್ ಮತ್ತು ಕಮಿಷನರ್ ವರದಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಮಹಜರ್ ವರದಿಯನ್ನು ನಿಸಿ-1 ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಅಳತೆಯನ್ನು ನಿಸಿ-2 ಎಂದು ಗುರುತಿಸಲಾಯಿತು. ಕಮಿಷನರ್ ವರದಿಯನ್ನು ನಿಸಿ-3 ಎಂದು ಗುರುತಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರು ಶ್ರೀ ಸಿ.ಪಿ. ವಕೀಲರಿಂದಃ

ನ್ಯಾಯಾಲಯದ ನಿರ್ದೇಶನದಂತೆ ವಾದಿ ಮತ್ತು ಪ್ರತಿವಾದಿಗಳಿಗೆ ನೋಟಿಸ್ ನೀಡಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಮಹಜರ್ ಮಾಡುವ ಕಾಲಕ್ಕೆ ಹಾಜರಿದ್ದರಾ ಎಂದರೆ ಸಾಕ್ಷಿ ಇದ್ದರು ಎಂದು ಹೇಳುತ್ತಾರೆ. ನ್ಯಾಯಾಲಯದ ಆದೇಶದಂತೆ ವಾದಿ ಮತ್ತು ಪ್ರತಿವಾದಿಗಳಿಂದ ದಾಖಲಾತಿಯಿಂದ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಮುನ್ಸಿಪಾಲಿಟಿಯಿಂದ ವಾದಿಯ ದಾಖಲಾತಿ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ಪ್ರತಿವಾದಿಗಳ ದಾಖಲಾತಿ ಪಡೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಎಂದು ಹೇಳುತ್ತಾರೆ. ವಾದಿಗಳು ತಮ್ಮ ನಿವೇಶನದ ಅಳತೆ ಒಳಗೆ ಮನೆ ಕಟ್ಟಿರುತ್ತಾರೆಂದರೆ ಸಾಕ್ಷಿ ಅಳತೆಯ ವ್ಯತ್ಯಾಸ ಇದೆ ಎಂದು ಹೇಳುತ್ತಾರೆ. ಪ್ರತಿವಾದಿಗಳ ಕಟ್ಟಡವನ್ನು ಅಳತೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ವಾದಿಗಳ ಮನೆಯ ಉತ್ತರ ದಿಕ್ಕಿನಲ್ಲಿ ತಿರುಗಾಡಲು ರಸ್ತೆ ಇದೆಯೋ, ಇಲ್ಲವೋ ಎಂದು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಗಳು ಒತ್ತುವರಿ ಮಾಡಿ ಗೋಡೆ ಕಟ್ಟಿರುವುದನ್ನು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಒತ್ತುವರಿ ಬಗ್ಗೆ ಪರಶೀಲಿಸಿಲ್ಲ, ಗೋಡೆ ಇದೆ ಎಂದು ಹೇಳುತ್ತಾರೆ. 1ನೇ ಪ್ರತಿವಾದಿಯ ಮನೆಯ ಅಳತೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 1ನೇ ಪ್ರತಿವಾದಿ ತನ್ನ ದಾಖಲಾತಿಯಲ್ಲಿ ಮಾರ್ಪಾಟು ಮಾಡಿಕೊಂಡು ಮನೆ ಕಟ್ಟಿರುವ ಬಗ್ಗೆ ಏನಾದರೂ ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ವಾದಿಗಳು ಪ್ರತಿವಾದಿಗಳು ಒತ್ತುವರಿ ಮಾಡಿ ಕಟ್ಟಿರುವ ಜಾಗದಲ್ಲೇ ಓಡಾಡುತ್ತಿದ್ದರು, ಈಗ ಅಲ್ಲಿ ಜಾಗ ಇಲ್ಲ ಎಂದರೆ ಸಾಕ್ಷಿ ನಾನು ಅದನ್ನು ನೋಡಿಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯದ ಆದೇಶದಂತೆ ವಾದಿ ಮತ್ತು ಪ್ರತಿವಾದಿಗಳ ನಿವೇಶನವನ್ನು ಅಳತೆ ಮಾಡಿ ವರದಿಯನ್ನು ಸಲ್ಲಿಸಬೇಕಾಗಿತ್ತು, ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನಿಸಿ-1 ಮತ್ತು 2 ರಂತೆ ಮಹಜರ್ ಮತ್ತು ಅಳತೆ ಮಾಡುವ ಕಾಲಕ್ಕೆ ವಾದಿಗಳು, ಪ್ರತಿವಾದಿಗಳು ಮತ್ತು ನಗರಸಭೆಯ ಕಂದಾಯ ರಜಸ್ವ ನಿರೀಕ್ಷಕರು ಇದ್ದರು. ಮಹಜರ್ ನ್ನು 11.30 ರಿಂದ 12.30 ವರೆಗೂ ಮಾಡಿರುತ್ತೇನೆ. ನಿಸಿ-1 ಮತ್ತು 2 ನ್ನು ಸ್ಥಳದಲ್ಲಿ ಮಾಡಿಲ್ಲ, ಕಚೇರಿಯಲ್ಲಿ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಕಾಶೆಯ ಉತ್ತರಕ್ಕೆ 1ನೇ ಪ್ರತಿವಾದಿಯ ಮನೆ ಇದೆ ಎಂದರೆ ಸರಿ. ವಾದಿಯ ಮನೆಯ ಪೂರ್ವಕ್ಕೆ 12 ಅಡಿಯ ರಸ್ತೆ ಇದ್ದು, ಸದರಿ ರಸ್ತೆಯನ್ನು ಉತ್ತರದಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿ ಮನೆ ಕಟ್ಟಿರುತ್ತಾರೆಂದರೆ ಸಾಕ್ಷಿ ಕಂಪೌಂಡ್ ಇದೆ ಎಂದು ಹೇಳುತ್ತಾರೆ. 1ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ಸುಳ್ಳು ವರದಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು **1** ಮತ್ತು **2**ನೇ ಪ್ರತಿವಾದಿ ಪರ ವಕೀಲರು</u>

ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರುವಿಚಾರಣೆ ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.